ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 29–4–2015

## ಪತ್ರಿಕಾ ಆಮಂತ್ರಣ

| | | | |
|---|---|---|---|
| 1 | **Press Conference**:<br><br>**Shri Arvind Jadhav, I.A.S., Additional Chief Secretary, Tourism Department.** | **30–04–2015**<br>**Thursday at 1-00 P.M.** | **IHM-B Campus. Near M.S. Building and SKSJT Hostel, SJ. Polytechnic Campus, Bangalore** |
| 2 | **Farewell Address to Hon'ble Shri Justice N. Ananda, Judge, High Court of Karnataka by the Chairman, Karnataka State Bar Council.** | **30–04–2015**<br>**Thursday at 2-00 P.M.** | **Court Hall No. 1 of the Principal Bench of the High Court of Karnataka.** |
| 3 | ಪತ್ರಿಕಾಗೋಷ್ಠಿ:<br>ಶ್ರೀ ಹೆಚ್. ಆಂಜನೇಯ,<br>ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು | 30–4–2015<br>ಗುರುವಾರ<br>ಸಂಜೆ 4–00 ಗಂಟೆಗೆ | ಕೊಠಡಿ ಸಂಖ್ಯೆ 334,<br>ಸಮ್ಮೇಳನ ಸಭಾಂಗಣ,<br>ಮೂರನೇ ಮಹಡಿ<br>ವಿಧಾನ ಸೌಧ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಕೃಷಿ ಅಭಿಯಾನ ಕಾರ್ಯಕ್ರಮ
## " ಇಲಾಖೆಗಳ ನಡಿಗೆ ರೈತರ ಬಾಗಿಲಿಗೆ "

ಬೆಂಗಳೂರು, ಏಪ್ರಿಲ್ 29 (ಕರ್ನಾಟಕ ವಾರ್ತೆ)

ಕೃಷಿ ಇಲಾಖೆಯು ಕೃಷಿಗೆ ಸಂಬಂಧಿಸಿದ ಇತರೆ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಂದಿಗೆ ಸಮಗ್ರ ಕೃಷಿ ಮಾಹಿತಿಯನ್ನು ಪ್ರಚಾರ ಪಡಿಸುವ ದಿಸೆಯಲ್ಲಿ ವಿನೂತನ ಕಾರ್ಯಕ್ರಮ **"ಕೃಷಿ ಅಭಿಯಾನ"** – ಇಲಾಖೆಗಳ ನಡಿಗೆ ರೈತರ ಬಾಗಿಲಿಗೆ ಎಂಬ ಶೀರ್ಷಿಕೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಕೃಷಿ ಇಲಾಖಾ ಯೋಜನೆಗಳೊಂದಿಗೆ, ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುವುದು ಪ್ರಮುಖ ಉದ್ದೇಶ. ಮುಖ್ಯವಾಗಿ ಬಿತ್ತನೆ ಬೀಜಗಳ ಮಾಹಿತಿ ಹಾಗೂ ಲಭ್ಯತೆ, ಕೃಷಿ ಭಾಗ್ಯ ಯೋಜನೆ, ಕೃಷಿ ಯಂತ್ರೋಪಕರಣಗಳ ಬಗ್ಗೆ ಮಾಹಿತಿ, ಹನಿ ನೀರಾವರಿ, ಬೆಳೆ ವಿಮೆ, ಕೃಷಿ ಸಾಲ ಸೌಲಭ್ಯ, ಪಶುಸಂಗೋಪನೆ ಮುಂತಾದವುಗಳ ಬಗ್ಗೆ ರೈತರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶವಾಗಿರುತ್ತದೆ. **ಮೇ 1 ರಿಂದ 30 ಜೂನ್2015 ರ ವರೆಗೆ ಕಾರ್ಯಕ್ರಮ ನಡೆಯಲಿದೆ.**

**ಕಾರ್ಯಕ್ರಮದ ಅಂಗವಾಗಿ ಸಮಗ್ರ ಕೃಷಿ ಮಾಹಿತಿ ಘಟಕ ಕೃಷಿ ವಸ್ತು ಪ್ರದರ್ಶನ ರೈತ ಸಂವಾದ ಏರ್ಪಡಿಸಲಾಗಿದೆ. ಹೋಬಳಿ ಮಟ್ಟದಲ್ಲಿ ಮೂರು ದಿನಗಳ ಕಾಲ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.** ಪ್ರತಿ ಹೋಬಳಿಯಲ್ಲಿ, ಗ್ರಾಮ ಪಂಚಾಯತಿವಾರು ಅಧಿಕಾರಿಗಳ–ವಿಜ್ಞಾನಿಗಳ ತಂಡಗಳನ್ನು ರಚಿಸಿಕೊಂಡು ಸ್ಥಳೀಯ ಸಮಸ್ಯೆಗಳು ಹಾಗೂ ಅವಶ್ಯಕತೆಗಳ ಬಗ್ಗೆ ಚರ್ಚಿಸಲು ಸಂವಾದ ಕಾರ್ಯಕ್ರಮ ಏರ್ಪಡಿಸಲಾಗುವುದು. ಹೋಬಳಿ ಮಟ್ಟದಲ್ಲಿ ಕೃಷಿ ವಸ್ತುಪ್ರದರ್ಶನವನ್ನು ಏರ್ಪಡಿಸಿ ವಿವಿಧ ಅಭಿವೃದ್ಧಿ ಇಲಾಖೆಗಳ ಮಾಹಿತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು.

ಬಾಬು/ಕೆಎಂ

ವಾರ್ತಾ ವಿಶೇಷ:

# ಕೃಷಿ ಅಭಿಯಾನ

## ' ಇಲಾಖೆಗಳ ನಡಿಗೆ ರೈತರ ಬಾಗಿಲಿಗೆ '

ಕೃಷಿಯನ್ನು ಹೆಚ್ಚು ಲಾಭದಾಯಕವಾಗಿ ಮಾಡಲು ಮತ್ತು ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಭದ್ರತೆ ನೀಡಲು, ಲಭ್ಯವಿರುವ ಸಾಗುವಳಿ ಜಮೀನಿನಲ್ಲಿ ಗರಿಷ್ಠ ಕೃಷಿ ಉತ್ಪಾದನೆಯನ್ನು ಪಡೆಯುವುದು ಅತ್ಯಾವಶ್ಯಕವಾಗಿದೆ. ಬೆಳೆ ವೈವಿಧ್ಧೀಕರಣ, ವ್ಯವಸಾಯ ವೆಚ್ಚದಲ್ಲಿ ಕಡಿತ, ಕೃಷಿಯೊಂದಿಗೆ ಪೂರಕ ಉಪಕಸುಬುಗಳಾದ ಪಶುಸಂಗೋಪನೆ, ರೇಷ್ಮೆ ಕೃಷಿ, ಮೀನುಗಾರಿಕೆ ಮುಂತಾದ ಚಟುವಟಿಕೆಗಳನ್ನು ರೈತರು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಕೃಷಿ ಇಲಾಖೆಯು ಪ್ರಸ್ತುತ ಪರಿಸ್ಥಿತಿಯನ್ನು ಮನಗಂಡು, ಉತ್ಪಾದಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವಶ್ಯವಿರುವ ತಂತ್ರಜ್ಞಾನವನ್ನು ತಲುಪಿಸಲು, ಏಕಗವಾಕ್ಷಿ ವಿಸ್ತರಣಾ ಪದ್ಧತಿಯಲ್ಲಿ ಸಮಗ್ರ ಕೃಷಿ ಮಾಹಿತಿಯನ್ನು ವಿವಿಧ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಂದಿಗೆ ಸಮೂಹ ಜಾಗೃತಿ ಕಾರ್ಯಕ್ರಮವಾದ ***"ಕೃಷಿ ಅಭಿಯಾನ"*** ದ ಮುಖಾಂತರ ತಲುಪಿಸುವ ಪ್ರಯತ್ನ ನಡೆಸಿದೆ.

**ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ನಿರ್ದೇಶನದಂತೆ "ಕೃಷಿ ಅಭಿಯಾನ" ಕಾರ್ಯಕ್ರಮವನ್ನು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳ ಸಹಕಾರ ಮತ್ತು ವಿಶೇಷವಾಗಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಮೇಲುಸ್ತುವಾರಿಯಲ್ಲಿ ಆಯೋಜಿಸಬೇಕಾಗಿರುವುದರಿಂದ ಕಾರ್ಯಕ್ರಮದ ರೂಪುರೇಷಗಳನ್ನು ಈ ಕೆಳಕಂಡಂತೆ ಸಿದ್ದಪಡಿಸಲಾಗಿದ್ದು ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳುವುದು.**

**ಕೃಷಿ ಅಭಿಯಾನದ ಉದ್ದೇಶ:**

- ಕೃಷಿ ಹಾಗೂ ಬೇಸಾಯ ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸುವುದು.
- ಉತ್ಪಾದಕತೆ ಹೆಚ್ಚಿಸುವ ತಾಂತ್ರಿಕತೆಗಳ ಮನವರಿಕೆ.
- ವಿಜ್ಞಾನಿಗಳೊಂದಿಗೆ ರೈತರ ಸಂವಾದ

**ಕೃಷಿ ಅಭಿಯಾನದ ಸ್ವರೂಪ :** ಕೃಷಿ ಅಭಿಯಾನ ಈ ಮೂರು ಪ್ರಮುಖ ಘಟಕಗಳನ್ನೊಳಗೊಂಡಿರುತ್ತದೆ.

- ಸಮಗ್ರ ಕೃಷಿ ಮಾಹಿತಿ ಘಟಕ
- ಕೃಷಿ ವಸ್ತು ಪ್ರದರ್ಶನ
- ರೈತ ಸಂವಾದ

**ಅನುಷ್ಠಾನ:** ಕೃಷಿ ಅಭಿಯಾನವನ್ನು ಹೋಬಳಿ ಮಟ್ಟದಲ್ಲಿ ಅನುಷ್ಠಾನಗೊಳಿಸುವುದು.

- **ಹೋಬಳಿ ಮಟ್ಟದ ಕಾರ್ಯಕ್ರಮ – ಒಟ್ಟು ಮೂರು ದಿನಗಳು**

  ಕೃಷಿ ಅಭಿಯಾನ ಕಾರ್ಯಕ್ರಮವನ್ನು ಹೋಬಳಿ ಮಟ್ಟದಲ್ಲಿ ಮೂರು ದಿನಗಳ ಕಾಲ ಹಮ್ಮಿಕೊಳ್ಳುವುದು.

  **<u>ಮೊದಲನೇ & ಎರಡನೇ ದಿನ</u>**: ಪ್ರತಿ ಹೋಬಳಿಯಲ್ಲಿ, ಗ್ರಾಮ ಪಂಚಾಯಿತಿವಾರು ಕಾರ್ಯತಂಡವನ್ನು ರಚಿಸಿಕೊಂಡು, ಆಯಾ ಪಂಚಾಯತಿಗೆ ಸಿದ್ದಪಡಿಸಿದ ವೇಳಾಪಟ್ಟಿಯಂತೆ ಎಲ್ಲಾ ಗ್ರಾಮಪಂಚಾಯತಿಗಳು ಒಳಗೊಂಡಂತೆ ಎರಡು ದಿನಗಳ ಕಾಲ ತೀವ್ರ ಪ್ರಚಾರ ಕಾರ್ಯದ ಜೊತೆಗೆ ವಿಜ್ಞಾನಿಗಳು ಹಾಗೂ ಅಧಿಕಾರಿಗಳನ್ನೊಳಗೊಂಡ ತಂಡಗಳು ರೈತರೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸುವುದು. ಸದರಿ ಸಂವಾದ ಕಾರ್ಯಕ್ರಮದಲ್ಲಿ ರೈತರ ಸ್ಥಳೀಯ ಅವಶ್ಯಕತೆಗಳು ಮತ್ತು ಸಮಸ್ಯೆಗಳ ಬಗ್ಗೆ ಚರ್ಚೆಯನ್ನು ಕೈಗೊಳ್ಳುವುದು ಹಾಗೂ ಅವುಗಳ ನಿವಾರಣೆಗೆ ಸ್ಥಳದಲ್ಲಿಯೇ ಪರಿಹಾರ ಸೂಚಿಸುವುದು.

  **<u>ಮೂರನೇ ದಿನ</u>**: ಹೋಬಳಿ ಕೇಂದ್ರ ಸ್ಥಾನದಲ್ಲಿ ಕೃಷಿ ವಸ್ತು ಪ್ರದರ್ಶನ, ರೈತರ ಸಂವಾದದೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಲು ಅನುವಾಗುವಂತೆ ಕೃಷಿ ಅಭಿಯಾನ ಸಮಾರಂಭವನ್ನು ಏರ್ಪಡಿಸುವುದು. ಆಯಾ ಹೋಬಳಿಗೆ ಸಂಬಂಧಿಸಿದಂತೆ ವಿವರವಾಗಿ ಬೆಳೆವಾರು ಸಮಸ್ಯೆಗಳನ್ನು

ಚರ್ಚಿಸುವುದು ಹಾಗೂ ಪರಿಹಾರವನ್ನು ಸೂಚಿಸುವುದು. ಅಲ್ಲದೇ ಇತರೆ ಕೃಷಿ ಸಂಬಂಧಿತ ಇಲಾಖೆಗಳಾದ" ಪಶುಸಂಗೋಪನೆ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ ಇತ್ಯಾದಿ ಇಲಾಖೆಗಳ ಅಧಿಕಾರಿಗಳು ರೈತರ ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಸೂಚಿಸುವುದು. ಇದರ ಜೊತೆಗೆ, ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳ ವಿವಿಧ ಯೋಜನೆಗಳನ್ನು ಬಿಂಬಿಸುವ ಪ್ರದರ್ಶಿಕೆಗಳು, ಮಾದರಿಗಳು, ಪ್ರಾತ್ಯಕ್ಷಿಕೆಗಳನ್ನು ಒಳಗೊಂಡ ಕೃಷಿ ವಸ್ತು ಪ್ರದರ್ಶನವನ್ನು ಏರ್ಪಡಿಸುವುದು.

**ಅನುದಾನ: ಪ್ರತಿ ಹೋಬಳಿ ಮಟ್ಟದ ಕಾರ್ಯಕ್ರಮಕ್ಕಾಗಿ – ರೂ.0.75 ಲಕ್ಷ**

ಅನುಬಂಧ–4ರಲ್ಲಿ ನಿಗಧಿಪಡಿಸಿರುವ ಅನುದಾನವನ್ನು ಉಪಯೋಗಿಸಿಕೊಳ್ಳುತ್ತ, ಜಿಲ್ಲಾ ಪಂಚಾಯಿತಿ, ಇತರೆ ಇಲಾಖೆಗಳ ಕಾರ್ಯಕ್ರಮಗಳ ಅನುದಾನ, ಸ್ಥಳೀಯ ಸಂಸ್ಥೆಗಳಿಂದ sponsorship ಮುಖಾಂತರ ಒಟ್ಟಾರೆಯಾಗಿ ಕಾರ್ಯಕ್ರಮಕ್ಕೆ ಹೆಚ್ಚುವರಿ ಅನುದಾನ ಹೊಂದಿಸಿಕೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

**ಅನುಷ್ಠಾನ ಅವಧಿ:**

**ಕೃಷಿ ಅಭಿಯಾನ ಕಾರ್ಯಕ್ರಮದ ಆಚರಣೆಯನ್ನು ಪ್ರತಿ ಹೋಬಳಿಗೆ ಪ್ರತ್ಯೇಕ ದಿನಾಂಕವನ್ನು ನಿಗದಿಪಡಿಸಿಕೊಂಡು ಕಡ್ಡಾಯವಾಗಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಮೇ 1 ರಿಂದ 30 ಜೂನ್ 2015 ರೊಳಗಾಗಿ ಅನುಷ್ಠಾನಗೊಳಿಸುವುದು.**

**ಭಾಗವಹಿಸುವವರು:**

ಕೃಷಿ ಮತ್ತು ಬೇಸಾಯ ಸಂಬಂಧಿತ ಇಲಾಖಾ ಅಧಿಕಾರಿಗಳು, ಕೃಷಿ/ ತೋಟಗಾರಿಕೆ/ ರೇಷ್ಮೆ/ ಮೀನುಗಾರಿಕೆ/ ಪಶುಪಾಲನೆ/ ಸಹಕಾರ ಇಲಾಖೆಗಳು, ಪಶುವೈದ್ಯಕೀಯ ವಿಶ್ವವಿದ್ಯಾಲಯದ ವಿಜ್ಞಾನಿಗಳು, ಕೆ.ವಿ.ಕೆ ವಿಜ್ಞಾನಿಗಳು, ರೈತರು, ಜನಪ್ರತಿನಿಧಿಗಳು, ಕೃಷಿ ಪರಿಕರ ಸರಬರಾಜುದಾರರು, ಸಾಲ ಸೌಲಭ್ಯ ನೀಡುವ ಸಂಸ್ಥೆಗಳು, ಆತ್ಮ ಗುಂಪುಗಳು, ಸಾವಯವ ಕೃಷಿ ಸಂಘಗಳು, ಸ್ವಸಹಾಯ ಗುಂಪುಗಳು, ಸರ್ಕಾರೇತರ ಸಂಸ್ಥೆಗಳು ಇತ್ಯಾದಿ.

**ವಿಶೇಷ ಸೂಚನೆ: "ಕೃಷಿ ಅಭಿಯಾನ" ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್‌ನಲ್ಲಿ ತಯಾರಿಸಿದ ಬ್ಯಾನರ್‌ಗಳು(Banners), ಪ್ರಚಾರ ಸಾಮಗ್ರಿಗಳನ್ನು ಉಪಯೋಗಿಸದೇ ಬಯೋ ಡೀಗ್ರೇಡಬಲ್ (Bio-degradable material) ವಸ್ತುಗಳಿಂದ ತಯಾರಿಸಲಾದ ಬ್ಯಾನರ್‌ಗಳು & ಪ್ರಚಾರ ಸಾಮಗ್ರಿಗಳನ್ನು ಬಳಸುವುದು ಕಡ್ಡಾಯ.**

**ಅ) ಸಮಗ್ರ ಕೃಷಿ ಮಾಹಿತಿ ಘಟಕ :**

ಪ್ರತಿ ಹೋಬಳಿಯಲ್ಲಿ ಎಲ್ಲಾ ಗ್ರಾಮಪಂಚಾಯತಿಗಳು ಒಳಗೊಂಡಂತೆ ಎರಡು ದಿನಗಳ ಕಾಲ ತೀವ್ರ ಪ್ರಚಾರ ಕಾರ್ಯ ಕೈಗೊಳ್ಳಲು ಸಂಚಾರಿ ಕೃಷಿ ಮಾಹಿತಿ ಘಟಕವನ್ನು (ಇಋಖಜಔ ಅಚಟಣಜಔ ವಾಹನದಲ್ಲಿ) ವಿವಿಧ ಬೇಸಾಯ ಸಂಬಂಧಿತ ಇಲಾಖೆಗಳ ಪ್ರದರ್ಶಿಕೆಗಳು, ಸ್ತಬ್ಧಚಿತ್ರ, ಮಾದರಿಗಳನ್ನು

(ಟಙಙಚ) ಒಳಗೊಂಡ ಧ್ವನಿವರ್ಧಕದಲ್ಲಿ ಸಂದೇಶಗಳನ್ನು ಬಿತ್ತರಿಸಬೇಕಾಗಿರುತ್ತದೆ ಹಾಗೂ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನಗಳಲ್ಲಿ ರೈತರಿಗೆ ಮಾಹಿತಿ ನೀಡುವುದು, ತೀವ್ರ ಪ್ರಚಾರ ಕಾರ್ಯದ ಜೊತೆಗೆ ವಿಜ್ಞಾನಿಗಳು ಹಾಗೂ ಅಧಿಕಾರಿಗಳನ್ನೊಳಗೊಂಡ ತಂಡಗಳು ರೈತರೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಿದ ನಂತರ, ಮೂರನೇ ದಿನ ಹೋಬಳಿ ಕೇಂದ್ರ ಸ್ಥಾನದಲ್ಲಿ ಕೃಷಿ ವಸ್ತು ಪ್ರದರ್ಶನ, ರೈತರ ಸಂವಾದೊಂದಿಗೆ ಕೃಷಿ ಅಭಿಯಾನ ಸಮಾರಂಭವನ್ನು ಏರ್ಪಡಿಸುವುದು.

**ಆ) ಕೃಷಿ ವಸ್ತು ಪ್ರದರ್ಶನ :**

ಕೃಷಿ ವಸ್ತುಪ್ರದರ್ಶನವನ್ನು ವಿವಿಧ ಕೃಷಿ ಪರಿಕರ ಸಂಸ್ಥೆಗಳು ಕೃಷಿ/ತೋಟಗಾರಿಕೆ /ಪಶುವೈದ್ಯಕೀಯ ವಿಶ್ವವಿದ್ಯಾನಿಲಯ, ಸಾಲ ಸೌಲಭ್ಯ ಒದಗಿಸುವ ಸಂಸ್ಥೆಗಳು, ಸ್ವಸಹಾಯ ಸಂಘಗಳು ಇತ್ಯಾದಿ ಹಾಗೂ ಇತರೆ ಇಲಾಖೆಗಳ ಸಹಯೋಗದೊಂದಿಗೆ ಏರ್ಪಡಿಸುವುದು.

ಕೃಷಿ ಹಾಗೂ ಇತರೆ ಅಭಿವೃದ್ಧಿ ಇಲಾಖೆಗಳ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸುತ್ತಿರುವ ಸರ್ಕಾರೇತರ ಸಂಸ್ಥೆಗಳು, ಭೂಚೇತನ ಕಾರ್ಯಕ್ರಮದ ರೈತ ಅನುವುಗಾರರು, ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳು, ರೈತ ಕ್ಷೇತ್ರ ಪಾಠಶಾಲೆಯಲ್ಲಿ ತರಬೇತಿ ಹೊಂದಿದಂತಹ ರೈತರು, ಆತ್ಮ ಕಾರ್ಯಕ್ರಮದಲ್ಲಿರುವ ಸಿಬ್ಬಂದಿ ಮತ್ತು ಗುಂಪುಗಳು, ಸಾವಯವ ಕೃಷಿ ಸಂಘಗಳು ಕಡ್ಡಾಯವಾಗಿ ಭಾಗವಹಿಸತಕ್ಕದ್ದು. ಹಾಗೂ ತಮ್ಮ ಕಾರ್ಯಕ್ರಮದ ಚಟುವಟಿಕೆಗಳಗೆ ಸಂಬಂಧಿಸಿದಂತೆ ಮಾಹಿತಿಯನ್ನು ವಸ್ತುಪ್ರದರ್ಶನ ವೀಕ್ಷಿಸಲು ಬಂದಂತಹ ರೈತರಿಗೆ ನೀಡುವುದು.

**ವಸ್ತು ಪ್ರದರ್ಶನದಲ್ಲಿ ಕೆಳಕಂಡ ವಿಷಯಗಳಗೆ ಸಂಬಂಧಿಸಿದಂತೆ ಮಾಹಿತಿ ನೀಡುವುದು.**

- ಕೃಷಿ ತಾಂತ್ರಿಕ ಮಾಹಿತಿ
- ಹೊಸ ತಂತ್ರಜ್ಞಾನ ಪರಿಚಯ ಮತ್ತು ಕೌಶಲ್ಯ ಪ್ರಾತ್ಯಕ್ಷಿಕೆ, ಬೀಜೋಪಚಾರ/ ಸಸ್ಯ ಸಂರಕ್ಷಣಾ ಆಂದೋಲನ ಹಮ್ಮಿಕೊಳ್ಳುವುದು
- **ಕೃಷಿ ಭಾಗ್ಯ – ಬೆಳೆಗಳಿಗೆ ಸಂದಿಗ್ಧ ಪರಿಸ್ಥಿತಿಯಲ್ಲಿ ನೀರನ್ನು ಒದಗಿಸುವ ಬಗ್ಗೆ ಮಾಹಿತಿ ನೀಡುವುದು.**
- **ಭೂಚೇತನ, ಆತ್ಮ ಯೋಜನೆ, ರಾಷ್ಟ್ರೀಯ ಆಹಾರ ಭದ್ರತೆ ಮಿಷನ್, ಸಾವಯವ ಭಾಗ್ಯ, ಸಾವಯವ ಗ್ರಾಮ ಕಾರ್ಯಕ್ರಮ ಇತ್ಯಾದಿ**
- **ಕೃಷಿ ಪರಿಕರಗಳು, ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ (ಯಂತ್ರಧಾರೆ), ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳು, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಉಪಕರಣಗಳು ಇತ್ಯಾದಿ**
- ಕೃಷಿ ಹಾಗೂ ಇತರೆ ಇಲಾಖೆಗಳ ಯೋಜನೆಗಳು ಹಾಗೂ ಸವಲತ್ತುಗಳ ಲಭ್ಯತೆ
- ಮಣ್ಣು ಮಾದರಿಗಳ ಸಂಗ್ರಹಣೆ ಹಾಗೂ ಈಗಾಗಲೇ ವಿಶ್ಲೇಷಣೆಯಾಗಿರುವ ಮಾದರಿಗಳ ಮಣ್ಣು ಆರೋಗ್ಯ ಚೀಟಿಗಳ ವಿತರಣೆ
- ಖಾಸಗಿ ಕಂಪನಿಗಳ ಸಹಯೋಗದೊಂದಿಗೆ ಸಂಚಾರಿ ಮಣ್ಣು ಪರೀಕ್ಷಾ ಘಟಕಗಳನ್ನು ಉಪಯೋಗಿಸಿಕೊಂಡು ಮಣ್ಣು ಮಾದರಿಗಳ ವಿಶ್ಲೇಷಣೆ
- ಬೆಳೆ ವಿಮೆ ಮತ್ತು ಕೃಷಿ ಸಾಲ ಸೌಲಭ್ಯ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ.

- ರೈತರ ಕ್ಷೇತ್ರ ಪಾಠಶಾಲೆ, ಕೃಷಿ ಆಧಾರಿತ ಉಪ ಕಸುಬುಗಳ ಬಗ್ಗೆ ಮಾಹಿತಿ
- ಪಶುಗಳಿಗೆ ಲಸಿಕೆ ಕಾರ್ಯಕ್ರಮ ಮತ್ತು ಪಶು ಚಿಕಿತ್ಸಾ ಶಿಬಿರ
- ಸಮಗ್ರ ಕೃಷಿ ತಾಂತ್ರಿಕತೆಗಳನ್ನು ಬಿಂಬಿಸುವ ಸಾಕ್ಷ್ಯಚಿತ್ರ ಪ್ರದರ್ಶನ

**ಇ) ರೈತ ಸಂವಾದ :**

ಕ್ಷೇತ್ರ ಮಟ್ಟದಲ್ಲಿ ತಾಂತ್ರಿಕತೆಯನ್ನು ರೈತರು ಅಳವಡಿಸುವಾಗ ಎದುರಿಸುವ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಪರಿಹಾರೋಪಾಯಗಳನ್ನು ಸೂಚಿಸುವುದು ಮತ್ತು ಅವುಗಳನ್ನು ಅಳವಡಿಸುವಂತೆ ಮನವರಿಕೆ ಮಾಡಿಕೊಡುವುದು ಈ ಕಾರ್ಯಕ್ರಮದ ಚಟುವಟಿಕೆಗಳಲ್ಲಿ ಒಂದಾಗಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಕೃಷಿ/ತೋಟಗಾರಿಕೆ/ಪಶುವೈದ್ಯಕೀಯ ವಿಶ್ವವಿದ್ಯಾನಿಲಯದ ವಿಜ್ಞಾನಿ/ವಿಷಯ ತಜ್ಞರೊಂದಿಗೆ ರೈತರು ಮುಕ್ತವಾಗಿ ಚರ್ಚಿಸಬಹುದಾಗಿರುತ್ತದೆ. ಜಿಲ್ಲೆಯಲ್ಲಿನ ಕೃಷಿ ಚಟುವಟಿಕೆಗಳ ಆಧಾರದ ಮೇಲೆ ವಿಚಾರ ಗೋಷ್ಠಿಗಳನ್ನು ಆಯೋಜಿಸುವುದು. ಹೊಸ ಪ್ರಯತ್ನಗಳನ್ನು ನಿರ್ವಹಿಸಿರುವ ಪ್ರಗತಿಪರ ರೈತರ ಅನುಭವ ಹಂಚಿಕೊಳ್ಳಲು ಕೃಷಿ ಅಭಿಯಾನದಲ್ಲಿ ಅವಕಾಶ ಕಲ್ಪಿಸುವುದು.

**ಅನುಷ್ಠಾನ ಸಮಿತಿ:**

ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿರುವ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯನ್ವಯ (ಅನುಬಂಧ-1) ತಮ್ಮ ಜಿಲ್ಲೆಯಲ್ಲಿ ಕೃಷಿ ಅಭಿಯಾನವನ್ನು ಏರ್ಪಡಿಸುವ ಬಗ್ಗೆ ಚರ್ಚಿಸಿ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ಸಿದ್ದಪಡಿಸುವುದು.

ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿರುವ ತಾಲ್ಲೂಕು ಮಟ್ಟದ ಅನುಷ್ಠಾನ ಕಾರ್ಯತಂಡ (ಅನುಭಂದ-2) ಹಾಗೂ ಹೋಬಳಿ ಮಟ್ಟದ ಅನುಷ್ಠಾನ ಕಾರ್ಯತಂಡ (ಅನುಬಂಧ-3) ರಲ್ಲಿ ಚರ್ಚಿಸಿ, ಕ್ರಮವಹಿಸುವುದು. ಅನುಷ್ಠಾನ ಸಮಿತಿ/ ಕಾರ್ಯತಂಡದಲ್ಲಿ ಈ ಕೆಳಗೆ ತಿಳಿಸಿರುವ ವಿಷಯಗಳ ಬಗ್ಗೆ ಚರ್ಚಿಸುವುದು.

- ಕೃಷಿ ಅಭಿಯಾನದ ಉದ್ದೇಶ, ಹಮ್ಮಿಕೊಂಡಿರುವ ಚಟುವಟಿಕೆಗಳ ಪರಿಚಯ.
- ಪ್ರಚಾರಕ್ಕಾಗಿ ಸಿದ್ಧಪಡಿಸಬೇಕಿರುವ ಸಾಹಿತ್ಯ-ಸಾಮಗ್ರಿಗಳು ಹಾಗೂ ವಿವಿಧ ಇಲಾಖೆಗಳ ಜವಾಬ್ದಾರಿ ಮತ್ತು ಹೊಣೆ ನಿಗದಿ (Task Assignment).
- ಮಾದರಿ ವೇಳಾಪಟ್ಟಿ ರಚನೆ ಇತ್ಯಾದಿ.

**ಚುನಾಯಿತ ಪ್ರತಿನಿಧಿಗಳ ಭಾಗವಹಿಸುವಿಕೆ:**

ಕೃಷಿ ಅಭಿಯಾನದ ಕಾರ್ಯಕ್ರಮಗಳಿಗೆ ಎಲ್ಲಾ ಚುನಾಯಿತ ಪ್ರತಿನಿಧಿಗಳನ್ನು ಕಡ್ಡಾಯವಾಗಿ ಆಹ್ವಾನಿಸಿ ಅವರುಗಳು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕ್ರಮವಹಿಸುವುದು.

**ಕೃಷಿ ಅಭಿಯಾನ ಕಾರ್ಯಕ್ರಮದ ಚಟುವಟಿಕೆಗಳನ್ನು ನಿರ್ವಹಿಸುವ ವಿಧಾನ:**

- ❖ ಕಾರ್ಯಕ್ರಮದ ವೇಳಾ ಪಟ್ಟಿ ಅನ್ವಯ ಮುಂಚಿತವಾಗಿ ವ್ಯಾಪಕವಾದ ಪ್ರಚಾರ ಕೈಗೊಳ್ಳುವುದು.
- ❖ ದಿನಪತ್ರಿಕೆ/ರೇಡಿಯೋ/ದೂರದರ್ಶನ/ಕೇಬಲ್ ನೆಟ್‌ವರ್ಕ್‌ಗಳಲ್ಲಿ ಜಾಹೀರಾತು ನೀಡುವುದು.
- ❖ ಕಾರ್ಯಕ್ರಮದ ದಿನ ಸಮಗ್ರ ಕೃಷಿ ಮಾಹಿತಿ ಘಟಕವು ಆಯ್ದ ಮುಖ್ಯ ರಸ್ತೆಗಳಲ್ಲಿ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಕಲಾ ತಂಡದೊಂದಿಗೆ ಮೆರವಣಿಗೆ ಹೊರಡುವುದು.
- ❖ ಕೃಷಿ ವಸ್ತುಪ್ರದರ್ಶನ
- ❖ ಸವಲತ್ತುಗಳ ಸಾಂಕೇತಿಕ ವಿತರಣೆ
- ❖ ಮಾದರಿ ರೈತ ಪ್ರಯತ್ನಗಳ ಅನುಭವ ಹಂಚಿಕೆ
- ❖ ವಿಷಯ ತಜ್ಞರಿಂದ ನಿರ್ದಿಷ್ಟ ವಿಷಯ ಕುರಿತು ಕಿರು ಉಪನ್ಯಾಸ
- ❖ ತಜ್ಞರೊಂದಿಗೆ ರೈತರ ಸಂವಾದ
- ❖ ಹೊಸ ತಂತ್ರಜ್ಞಾನ ಪರಿಚಯ
- ❖ ವಿವಿಧ ಇಲಾಖೆಗಳ ಬಗ್ಗೆ ಮಾಹಿತಿ ಕರಪತ್ರಗಳ ವಿತರಣೆ.
- ❖ ಕೃಷಿ ಅಭಿಯಾನ ಬಗ್ಗೆ ಆಯ್ದ ರೈತರಿಂದ ಪ್ರತಿಕ್ರಿಯೆ ಆಲಿಕೆ

**ದಾಖಲೀಕರಣ:**

ಪ್ರತಿ ಹೋಬಳಿ ಮಟ್ಟದ ಕಾರ್ಯಕ್ರಮ ನಡೆಯುವ ಚಟುವಟಿಕೆಗಳನ್ನು ದೃಶ್ಯ (video & photos) ಮತ್ತು ಮುದ್ರಣ ಮಾಧ್ಯಮಗಳ (print media) ಮೂಲಕ ದಾಖಲಿಸುವುದು ಹಾಗೂ ಅವಶ್ಯ ದಾಖಲೆಗಳೊಂದಿಗೆ ಕೇಂದ್ರ ಕಛೇರಿಗೆ ಕಡ್ಡಾಯವಾಗಿ ವರದಿ ಸಲ್ಲಿಸುವುದು.

**ಕೃಷಿ ಅಭಿಯಾನದ ಪ್ರತಿಫಲಗಳು:**

**ಕೃಷಿ ಅಭಿಯಾನವು 'ಇಲಾಖೆಗಳ ನಡಿಗೆ ರೈತರ ಬಾಗಿಲಿಗೆ'** ಈ ಆಚರಣೆಯಿಂದ ನಿರೀಕ್ಷಿಸಿರುವ ಫಲಿತಾಂಶಗಳೆಂದರೆ:

- ಕೃಷಿ ಇಲಾಖೆ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳ ಯೋಜನೆಗಳು ರೈತರ ಮನೆ–ಮನಕ್ಕೆ ನೇರವಾಗಿ ತಲುಪಿಸುವುದು.
- ರೈತರಿಗೆ ಸಕಾಲದಲ್ಲಿ ಕೃಷಿ ಪರಿಕರಗಳು/ಸಾಮಗ್ರಿಗಳು/ಸಾಲಸೌಲಭ್ಯಗಳನ್ನು ದೊರಕಿಸಿಕೊಡುವುದು.
- ಮಾದರಿ ಪ್ರಯತ್ನಗಳು, ಮಾದರಿ ರೈತರು, ಜ್ಞಾನದ ಪರಸ್ಪರ ಹಂಚಿಕೆಗೆ ಅವಕಾಶ ಕಲ್ಪಿಸುವುದು.
- ತಾಂತ್ರಿಕತೆಗಳ ಅಳವಡಿಕೆಯನ್ನು ಪ್ರೋತ್ಸಾಹಿಸುತ್ತಾ, ಆಹಾರ ಬೆಳೆಗಳ ಉತ್ಪಾದಕತೆಯಲ್ಲಿ ಗಮನಾರ್ಹ ಬದಲಾವಣೆ ತರುವುದು.
- ರೈತ ಸಂಪರ್ಕ ಕೇಂದ್ರಗಳಲ್ಲಿ ಹೊಸ ತಂತ್ರಜ್ಞಾನಕ್ಕೆ ಅವಶ್ಯವಿರುವ ಬೇಡಿಕೆಗಳನ್ನು ಸಂಗ್ರಹಿಸುವುದು

- ಸಾಮಾನ್ಯ ಕೃಷಿ ಅಭಿವೃದ್ಧಿಗೆ ಬೇಕಾದ ಎಲ್ಲಾ ಕ್ರಮಗಳ ನಿರ್ವಹಣೆಗೆ ನಿರಂತರ ಸಿದ್ಧತೆ ಮಾಡುವುದು.

**ಸೂಚನೆ: ಮಾರ್ಗಸೂಚಿಯಲ್ಲಿ ವಿವರಿಸಿರುವ ಅಂಶಗಳು ವಿಷಯ ಸೂಚಿಯಾಗಿದ್ದು, ಆಯಾ ಜಿಲ್ಲೆಯ ಸ್ಥಳೀಯ ಅವಶ್ಯಕತೆಗೆ ತಕ್ಕಂತೆ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ರೂಪಿಸಬಹುದಾಗಿದೆ.**

## ಅನುಬಂಧ–1
## ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ

| | |
|---|---|
| ಅಧ್ಯಕ್ಷರು | ಜಿಲ್ಲಾಧಿಕಾರಿಗಳು |
| ಸಹ ಅಧ್ಯಕ್ಷರು | ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು |
| ಸದಸ್ಯ ಕಾರ್ಯದರ್ಶಿ | ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು |
| ಸದಸ್ಯರು | ಜಿಲ್ಲಾ ಪೋಲಿಸ್ ಅಧೀಕ್ಷಕರು<br>ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ<br>ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ<br>ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ<br>ಉಪ ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ<br>ವಿಸ್ತರಣಾ ಸಂಯೋಜಕರು, ಕೃಷಿ/ತೋಟಗಾರಿಕೆ/ಪಶುವೈದ್ಯಕೀಯ<br>ವಿಶ್ವವಿದ್ಯಾಲಯ ಅಥವಾ ವಿಜ್ಞಾನಿಗಳು, ಕೃಷಿ ವಿಜ್ಞಾನ ಕೇಂದ್ರ<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ<br>ಜಿಲ್ಲಾ ಶಿಕ್ಷಣಾಧಿಕಾರಿಗಳು<br>ವ್ಯವಸ್ಥಾಪಕರು, (NABARD)<br>ವ್ಯವಸ್ಥಾಪಕರು, (BLBC) |

## ಅನುಬಂಧ–2
## ತಾಲ್ಲೂಕು ಮಟ್ಟದ ಕಾರ್ಯತಂಡ

| | |
|---|---|
| ಸಂಯೋಜಕರು | ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು |
| ಕಾರ್ಯತಂಡ | ತಾಲ್ಲೂಕು ಪೋಲಿಸ್ ಅಧೀಕ್ಷಕರು<br>ತಾಲ್ಲೂಕು ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ<br>ತಾಲ್ಲೂಕು ಸಹಾಯಕ ನಿರ್ದೇಶಕರು, ಪಶುಸಂಗೋಪನಾ ಇಲಾಖೆ ತಾಲ್ಲೂಕು<br>ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ<br>ತಾಲ್ಲೂಕು ಮಟ್ಟದ ಅಧಿಕಾರಿಗಳು, ಕೃಷಿ ಮಾರುಕಟ್ಟೆ ಇಲಾಖೆ |

| | |
|---|---|
| | ತಾಲ್ಲೂಕು ಸಹಾಯಕ ನಿರ್ದೇಶಕರು, ರೇಷ್ಮೆ ಇಲಾಖೆ<br>ವಿಮಾ ಸಂಸ್ಥೆಯ ಪ್ರತಿನಿಧಿಗಳು<br>ವಿಜ್ಞಾನಿಗಳು, ಕೃಷಿ ವಿಜ್ಞಾನ ಕೇಂದ್ರ<br>ತಾಲ್ಲೂಕು ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ<br>ತಾಲ್ಲೂಕು ಅರಣ್ಯ ಇಲಾಖೆ ಅಧಿಕಾರಿಗಳು<br>ತಾಲ್ಲೂಕು ಶಿಕ್ಷಣಾಧಿಕಾರಿಗಳು<br>ವ್ಯವಸ್ಥಾಪಕರು, (BLBC) |

**ಅನುಬಂಧ-3**

**ಹೋಬಳಿ ಮಟ್ಟದ ಅನುಷ್ಠಾನ ಕಾರ್ಯತಂಡ**

| ಸಂಯೋಜಕರು | ಹೋಬಳಿ ಮಟ್ಟದ ಕೃಷಿ ಅಧಿಕಾರಿ |
|---|---|
| ಕಾರ್ಯತಂಡ | Nodal Scientist, ಕೃಷಿ ವಿಶ್ವವಿದ್ಯಾಲಯ<br>**ಹೋಬಳಿ ಮಟ್ಟದ ಅಧಿಕಾರಿಗಳು:**<br>ಕೃಷಿ ಇಲಾಖಾ ಅಧಿಕಾರಿಗಳು<br>ತೋಟಗಾರಿಕೆ ಇಲಾಖೆ<br>ಪಶುಸಂಗೋಪನಾ ಇಲಾಖೆ ಅಧಿಕಾರಿಗಳು<br>ರೇಷ್ಮೆ ಇಲಾಖೆ ಅಧಿಕಾರಿಗಳು<br>ಕಂದಾಯ ಅಧೀಕ್ಷಕರು<br>ಸಹಕಾರ ಇಲಾಖೆ ಅಧಿಕಾರಿಗಳು<br>ಅರಣ್ಯ ಇಲಾಖೆ ಅಧಿಕಾರಿಗಳು<br>ವಿಮಾ ಸಂಸ್ಥೆಯ ಪ್ರತಿನಿಧಿಗಳು<br>ಶಿಕ್ಷಣ ಇಲಾಖೆ ಅಧಿಕಾರಿಗಳು<br>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು |

**ಅನುಬಂಧ-4**

**ಹೋಬಳಿ ಮಟ್ಟದಲ್ಲಿ ಆಯೋಜಿಸಲಾಗುವ "ಕೃಷಿ ಅಭಿಯಾನ" ಕಾರ್ಯಕ್ರಮದ ಆಚರಣೆಗೆ (ಮೂರು ದಿನಗಳು) ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿದೆ.**

| ಕ್ರ.ಸಂ | ಕಾರ್ಯಕ್ರಮ | ಅನುದಾನ (ರೂ.ಗಳಲ್ಲಿ) |
|---|---|---|
| 1 | ಸಂಚಾರಿ ಮಾಹಿತಿ ಘಟಕದ ಇಂಧನ ವೆಚ್ಚ, ಪ್ರಚಾರ (Posters, Banner, Brochures, Leaflets) ಮತ್ತು ಜಾನಪದ ಕಲಾ ತಂಡ | **ರೂ. 75,000** |
| 2 | ಸಂವಾದ ವೇದಿಕೆ / ವಸ್ತುಪ್ರದರ್ಶನ – ಶಾಮಿಯಾನ ಮತ್ತು ಕುರ್ಚಿಗಳ ವ್ಯವಸ್ಥೆ, ಕೃಷಿ | |

| | | |
|---|---|---|
| | ಚಲನಚಿತ್ರ ಪ್ರದರ್ಶನಕ್ಕೆ Projector / LCD Screen, ಜನರೇಟರ್, ಧ್ವನಿವರ್ಧಕ, ಇತ್ಯಾದಿ | |
| 3 | ರೈತರಿಗೆ ಲಘು ಉಪಹಾರ ಮತ್ತು ಪ್ರಯಾಣ ವೆಚ್ಚ | |

**ಸೂಚನೆ:**

1. ಅನುಬಂಧ-4ರಲ್ಲಿ ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ಜಿಲ್ಲಾ ಪಂಚಾಯಿತಿ, ಇತರೆ ಇಲಾಖೆಗಳ ಕಾರ್ಯಕ್ರಮಗಳ ಅನುದಾನ, ಸ್ಥಳೀಯ ಸಂಸ್ಥೆಗಳ sponsorship ಮುಖಾಂತರ ಒಟ್ಟಾರೆಯಾಗಿ ಕಾರ್ಯಕ್ರಮಕ್ಕೆ ಹೆಚ್ಚುವರಿ ಅನುದಾನ ಹೊಂದಿಸಿಕೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.
2. ಕಾರ್ಯಕ್ರಮಗಳಲ್ಲಿ ಭಾಗವಹಿಸುವ ರೈತಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರನ್ನು ಕಡ್ಡಾಯವಾಗಿ ನೊಂದಣಿ ಮಾಡಬೇಕು.

ಬಾಬು/ಕೆಎಂ